Akashvani : Bangalore
National Bulletin In Kannada
22.07.2024 / 13.10 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
22.07.2024 13.10 hrs

<><*<><>*><>

<u>ಮುಖ್ಯಾಂಶಗಳು</u>

೧. ಸಂಸತ್ತಿನ ಬಜೆಟ್ ಅಧಿವೇಶನ ಇಂದಿನಿಂದ ಆರಂಭ: ಇಂದು ಆರ್ಥಿಕ ಸಮೀಕ್ಷೆ ಹಾಗೂ ನಾಳೆ ಕೇಂದ್ರ ಬಜೆಟ್ ಮಂಡನೆ

೨. ನಾಳೆ ಮಂಡನೆಯಾಗಲಿರುವ ಬಜೆಟ್ ಅಮೃತ ಕಾಲದ ಮಹತ್ವದ ಬಜೆಟ್ ಆಗಲಿದೆ: ಪ್ರಧಾನಿ ನರೇಂದ್ರ ಮೋದಿ

೩. ಅಮರನಾಥ ಗುಹಾಂತರ ದೇಗುಲ ಯಾತ್ರೆ ಮುಂದುವರಿಕೆ: ಯಾತ್ರಾರ್ಥಿಗಳ ಮತ್ತೊಂದು ತಂಡ ದೇಗುಲದತ್ತ ಪಯಣ

೪. ೨೦೨೪ರ ಅಮೆರಿಕ ಅಧ್ಯಕ್ಷೀಯ ಚುನಾವಣೆ ಸ್ಪರ್ಧೆಯಿಂದ ಹೊರಗುಳಿಯುವುದಾಗಿ ಅಮೆರಿಕ ಅಧ್ಯಕ್ಷ ಜೋ ಬಿಡೆನ್ ಘೋಷಣೆ

<><*<><>*><>

ಸಂಸತ್ತಿನಲ್ಲಿ ಇಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ೨೦೨೩-೨೦೨೪ ರ ಆರ್ಥಿಕ ಸಮೀಕ್ಷೆಯನ್ನು ಮಂಡಿಸಲಿದ್ದಾರೆ. ಮುಖ್ಯ ಆರ್ಥಿಕ ಸಲಹೆಗಾರ ಡಾ.ವಿ.ಅನಂತ ನಾಗೇಶ್ವರನ್ ಅವರ ಮೇಲ್ವಿಚಾರಣೆಯಲ್ಲಿ ಈ ದಾಖಲೆಯನ್ನು ಸಿದ್ಧಪಡಿಸಲಾಗಿದೆ. ಆರ್ಥಿಕ ಸಮೀಕ್ಷೆಯನ್ನು ಲೋಕಸಭೆಯಲ್ಲಿ ಮಂಡಿಸಿದ ನಂತರ ಮುಖ್ಯ ಆರ್ಥಿಕ ಸಲಹೆಗಾರರು ಇಂದು ಮಧ್ಯಾಹ್ನ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಆರ್ಥಿಕ ಸಮೀಕ್ಷೆಯು, ಆರ್ಥಿಕತೆಯ ವರದಿ ಮತ್ತು ಮುಂದಿನ ಬೆಳವಣಿಗೆಯ ದೃಷ್ಟಿಕೋನ, ಆರ್ಥಿಕತೆಯ ಸ್ಥಿತಿ, ಭವಿಷ್ಯ ಮತ್ತು ನೀತಿ ಸವಾಲುಗಳ ಕುರಿತ ವಿವರವನ್ನು ನೀಡುತ್ತದೆ. ಆರ್ಥಿಕತೆಯ ವಿವಿಧ ವಲಯಗಳ ಅಂಕಿ-ಅಂಶಗಳ ಮಾಹಿತಿ ಮತ್ತು ವಿಶ್ಲೇಷಣೆಯನ್ನು ಸಮೀಕ್ಷೆ ಒದಗಿಸುತ್ತದೆ. ಅಲ್ಲದೇ, ಉದ್ಯೋಗ, ಜಿಡಿಪಿ ಬೆಳವಣಿಗೆ, ಹಣದುಬ್ಬರ ಮತ್ತು ಬಜೆಟ್ ಕೊರತೆಯ ಮಾಹಿತಿಯನ್ನು ನೀಡುತ್ತದೆ. ಐಎಂಎಫ್, ೨೦೨೪-೨೫ ರ ಹಣಕಾಸು ವರ್ಷದ ಭಾರತದ ಆರ್ಥಿಕ

ಬೆಳವಣಿಗೆಯ ಮುನ್ಸೂಚನೆಯನ್ನು ಏಪ್ರಿಲ್‌ನಲ್ಲಿ ಶೇಕಡ ೬.೮ ರಿಂದ ಶೇಕಡ ೭ಕ್ಕೆ ಏರಿಸಿದ ಸಮಯದಲ್ಲಿ ಆರ್ಥಿಕ ಸಮೀಕ್ಷೆಯನ್ನು ಪ್ರಸ್ತುತಪಡಿಸಲಾಗುತ್ತಿದೆ. ಜೂನ್‌ನಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್, ಬೆಳವಣಿಗೆಯ ಮುನ್ಸೂಚನೆಯನ್ನು ಶೇಕಡಾ ೭ ರಿಂದ ೭.೨ ಕ್ಕೆ ಪರಿಷ್ಕರಿಸಿತ್ತು.

<><*<><>*><>

ಸಂಸತ್ತಿನ ಬಜೆಟ್ ಅಧಿವೇಶನ ಇಂದಿನಿಂದ ಆರಂಭವಾಗಲಿದೆ. ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ನಾಳೆ ಬಜೆಟ್ ಮಂಡಿಸಲಿದ್ದಾರೆ. ಇಂದು ಆರ್ಥಿಕ ಸಮೀಕ್ಷೆಯನ್ನು ಮಂಡಿಸಲಾಗುವುದು.ಬಜೆಟ್ ಅಧಿವೇಶನ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಸರ್ವಪಕ್ಷಗಳ ಸಭೆ ನಡೆಯಿತು. ಸಂಸತ್ತಿನ ಉಭಯ ಸದನಗಳಲ್ಲಿ ಕಲಾಪ ಸುಗಮವಾಗಿ ನಡೆಸುವ ನಿಟ್ಟಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸಹಕರಿಸುವಂತೆ ಸಭೆಯಲ್ಲಿ ಸರ್ಕಾರ ಕೋರಿತು. ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಕಿರಣ್ ರಿಜಿಜು, ಅರ್ಜುನ್‌ರಾಮ್ ಮೇಘ್ವಾಲ್, ಜೆ.ಪಿ. ನಡ್ಡಾ, ಚಿರಾಗ್ ಪಾಸ್ವಾನ್, ರಾಮದಾಸ್ ಅಠಾವಳೆ ಮತ್ತು ಕಾಂಗ್ರೆಸ್ ನಾಯಕರಾದ ಜೈರಾಮ್ ರಮೇಶ್, ಗೌರವ್ ಗೊಗಯ್, ಎನ್‌ಸಿಪಿ ನಾಯಕ ಪ್ರಫುಲ್ ಪಟೇಲ್, ಡಿಎಂಕೆ ನಾಯಕರಾದ ಟಿ.ಆರ್. ಬಾಲು ಮತ್ತು ತಿರುಚಿ ಶಿವಾ, ಆಮ್ ಆದ್ಮಿ ಪಕ್ಷದ ನಾಯಕ ಸಂಜಯ್ ಸಿಂಗ್, ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ ಸಭೆಯಲ್ಲಿ ಭಾಗವಹಿಸಿದ್ದರು.

<><*<><>*><>

ದೇಶದಲ್ಲಿ ಇದುವರೆಗೆ ಪಾಟ್ನಾದಲ್ಲಿ ಮಾತ್ರ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಪ್ರಕರಣದ ಕುರಿತು ಸರ್ವೋಚ್ಚ ನ್ಯಾಯಾಲಯದ ವಿಚಾರಣೆ ನಡೆಯುತ್ತಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ. ಲೋಕಸಭೆ ಪ್ರಶ್ನೋತ್ತರ ವೇಳೆ ಪೂರಕ ಪ್ರಶ್ನೆಗಳಿಗೆ ಉತ್ತ ನೀಡಿದ ಸಚಿವರು, ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಪ್ರತಿಪಕ್ಷಗಳು ಮಾಡುತ್ತಿರುವ ಆರೋಪಗಳು ಊಹಾಪೋಹದಿಂದ ಕೂಡಿವೆ. ನೀಟ್ ಪರೀಕ್ಷೆಗಾಗಿ ದೇಶದಲ್ಲಿ ನಾಲ್ಕು ಸಾವಿರದ ೭೦೦ ಕೇಂದ್ರಗಳನ್ನು ಆರಂಭಿಸಲಾಗಿತ್ತು. ಅದರಲ್ಲಿ ಒಂದು ಕೇಂದ್ರದಲ್ಲಿ ಲೋಪ ಕಂಡುಬಂದಿದೆ ಎಂದರು. ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡಲು ಕೇಂದ್ರ ಸರ್ಕಾರ ಸದಾ ಬದ್ಧವಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

<><*<><>*><>

ನಾಳೆ ಮಂಡನೆಯಾಗಲಿರುವ ಬಜೆಟ್ ಅಮೃತ ಕಾಲದ ಮಹತ್ವದ ಬಜೆಟ್ ಆಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇಂದು ಅಧಿವೇಶನ ಆರಂಭಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಧಾನಮಂತ್ರಿ, ಈ ಬಾರಿಯ ಬಜೆಟ್ ಜನಪರವಾಗಿರುತ್ತದೆ ಎಂದು ಮಾಹಿತಿ ನೀಡಿದ್ದಾರೆ. ಈ ಅವಧಿಯ ಬಜೆಟ್ ಮುಂದಿನ ಐದು ವರ್ಷಗಳಿಗೆ ದಿಕ್ಸೂಚಿಯಾಗಿರುತ್ತದೆ. ಇದು ಸರ್ಕಾರದ ಧ್ಯೇಯವಾದ 'ವಿಕಸಿತ್ ಭಾರತ್'ಗೆ ಬಲವಾದ ಅಡಿಪಾಯವಾಗಲಿದೆ ಎಂದು ಅವರು ಹೇಳಿದರು. ಮುಂದಿನ ನಾಲ್ಕೂವರೆ ವರ್ಷಗಳ ಕಾಲ ರಾಜಕೀಯ ಪಕ್ಷಗಳು ಪಕ್ಷದ ರೇಖೆಗಳಿಗಿಂತ ಮೇಲೇರಬೇಕು ಮತ್ತು ದೇಶಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳಬೇಕು ಎಂದು ಪ್ರಧಾನಿ ತಿಳಿಸಿದರು. ೨೦೨೯ರ ಚುನಾವಣಾ ವರ್ಷದಲ್ಲಿ ಪಕ್ಷಗಳು ರಾಜಕೀಯದಲ್ಲಿ ತೊಡಗಬಹುದು ಆದರೆ ಅಲ್ಲಿಯವರೆಗೆ ರೈತರು, ಯುವಕರು ಮತ್ತು ದೇಶದ ಸಬಲೀಕರಣಕ್ಕಾಗಿ ಎಲ್ಲರೂ ಸಂಕಲ್ಪ ತೊಡಬೇಕು. ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದರು.

<><*<><>*><>

ಭಾರತವು ಜಾಗತಿಕ ಸಹಕಾರವನ್ನು ಉತ್ತೇಜಿಸಲು ಮತ್ತು ಪಾರಂಪರಿಕ ಸಂರಕ್ಷಣಾ ಪ್ರಯತ್ನಗಳಿಗೆ ಸ್ಥಳೀಯ ಸಮುದಾಯಗಳನ್ನು ತೊಡಗಿಸಿಕೊಳ್ಳಲು ಬದ್ಧವಾಗಿದೆ. ಭಾರತದ ಪರಂಪರೆ ಕೇವಲ ಇತಿಹಾಸವಲ್ಲ, ವಿಜ್ಞಾನವೂ ಆಗಿದೆ. ಭಾರತದ ೩೫೦ಕ್ಕೂ ಹೆಚ್ಚು ಪ್ರಾಚೀನ ಪರಂಪರೆಯ ತಾಣಗಳನ್ನು ಉಳಿಸಿಕೊಂಡು ಬಂದಿದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯ ಭಾರತ ಮಂಟಪದಲ್ಲಿ ವಿಶ್ವ ಪರಂಪರೆ ಸಮಿತಿಯ ೪೬ನೇ ಅಧಿವೇಶನ ಉದ್ಘಾಟಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಷಣ ಮಾಡಿದರು. ಭಾರತವು ಮೊದಲ ಬಾರಿಗೆ ವಿಶ್ವ ಪರಂಪರೆ ಸಮಿತಿ ಸಭೆಯನ್ನು ಆಯೋಜಿಸುತ್ತಿದೆ, ಇದು ಜುಲೈ ೩೧ ರವರೆಗೆ ಮುಂದುವರಿಯುತ್ತದೆ. ಪ್ರಾಚೀನ ಪರಂಪರೆ ಮರಳುವಿಕೆ ಜಾಗತಿಕ ಉದಾರತೆ ಮತ್ತು ಇತಿಹಾಸದ ಗೌರವವನ್ನು ಪ್ರತಿಬಿಂಬಿಸುತ್ತದೆ. ವಿಶ್ವದ ಅತ್ಯಂತ ಪುರಾತನ ನಾಗರಿಕತೆಗಳಲ್ಲಿ ಒಂದಾಗಿರುವ ಭಾರತ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿದೆ ಎಂದರು. ಯುನೆಸ್ಕೋ ವಿಶ್ವ ಪರಂಪರೆಯ ಕೇಂದ್ರಕ್ಕೆ ಒಂದು ಮಿಲಿಯನ್ ಡಾಲರ್ ಕೊಡುಗೆ ನೀಡಲಾಗುವುದು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಿಸಿದರು. ಈ ಅನುದಾನವನ್ನು ಸಾಮರ್ಥ್ಯ ನಿರ್ಮಾಣ, ತಾಂತ್ರಿಕ ನೆರವು ಮತ್ತು ವಿಶ್ವ ಪಾರಂಪರಿಕ ತಾಣಗಳ ಸಂರಕ್ಷಣೆಗೆ ಬಳಸಲಾಗುವುದು ಎಂದರು. ಈ ಅನುದಾನವನ್ನು ವಿಶೇಷವಾಗಿ ಜಾಗತಿಕ ದಕ್ಷಿಣದ ದೇಶಗಳಿಗೆ ಬಳಸಲಾಗುವುದು. ಭಾರತದ ದೃಷ್ಟಿ ಅಭಿವೃದ್ಧಿ ಹಾಗೂ ಪರಂಪರೆಯಾಗಿದೆ. ಈಶಾನ್ಯ ಭಾಗದ ಐತಿಹಾಸಿಕ ಮಾಯಿಡಮ್ ಅನ್ನು

ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿದೆ. ಇದು ಭಾರತದ ೪೩ ನೇ ವಿಶ್ವ ಪರಂಪರೆಯ ತಾಣವಾಗಿದೆ ಮತ್ತು ಈಶಾನ್ಯ ಭಾರತದ ಮೊದಲ ಪರಂಪರೆಯ ತಾಣ. ಇದನ್ನು ಸಾಂಸ್ಕೃತಿಕ ವಿಶ್ವ ಪರಂಪರೆ ಎಂದು ಪ್ರಸ್ತಾಪಿಸಲಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದರು. ಈ ಸಭೆಯಲ್ಲಿ, ವಿಶ್ವ ಪರಂಪರೆಯ ಪಟ್ಟಿಯಲ್ಲಿ ಹೊಸ ತಾಣಗಳನ್ನು ನಾಮನಿರ್ದೇಶನ ಮಾಡುವ ಪ್ರಸ್ತಾವನೆಗಳು, ಅಸ್ತಿತ್ವದಲ್ಲಿರುವ ೧೨೪ ವಿಶ್ವ ಪರಂಪರೆಯ ಆಸ್ತಿಗಳ ಸಂರಕ್ಷಣೆ, ಅಂತರರಾಷ್ಟ್ರೀಯ ನೆರವು ಮತ್ತು ವಿಶ್ವ ಪರಂಪರೆಯ ನಿಧಿಗಳ ಬಳಕೆ ಕುರಿತು ಚರ್ಚಿಸಲಾಗುವುದು. ೧೫೦ಕ್ಕೂ ಹೆಚ್ಚು ದೇಶಗಳಿಂದ ಎರಡು ಸಾವಿರಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

<><*<><>*><>

ಕಾಶ್ಮೀರ ಕಣಿವೆಯ ಅಮರನಾಥ ಗುಹಾಂತರ ದೇಗುಲಕ್ಕೆ ೩ ಸಾವಿರದ ೨೮೧ ಯಾತ್ರಾರ್ಥಿಗಳ ಮತ್ತೊಂದು ತಂಡ, ಜಮ್ಮುವಿನ ಭಗವತಿ ನಗರ ಯಾತ್ರಿ ನಿವಾಸದ ಮೂಲ ಶಿಬಿರದಿಂದ ಹೊರಟಿತು. ಇಂದು ಮುಂಜಾನೆ ೧೧೧ ವಾಹನಗಳಲ್ಲಿ ಯಾತ್ರಾರ್ಥಿಗಳು ಬೇಸ್ ಕ್ಯಾಂಪ್‌ನಿಂದ ಹೊರಟರು. ಈ ತಂಡದಲ್ಲಿ ೨ ಸಾವಿರದ ೩೭೫ ಪುರುಷರು, ೮೨೨ ಮಹಿಳೆಯರು, ೬ ಮಕ್ಕಳು, ೬೨ ಸಾಧುಗಳು ಮತ್ತು ೧೬ ಸಾಧ್ವಿನಿಯರು ಇದ್ದಾರೆ. ಇವರಲ್ಲಿ ಒಂದು ಸಾವಿರದ ೩೦೨ ಯಾತ್ರಾರ್ಥಿಗಳು ಬೆಳಗಿನ ಜಾವ ೩ ಗಂಟೆಗೆ ಬಾಲ್ತಾಲ್ ಬೇಸ್ ಕ್ಯಾಂಪ್‌ಗೆ ಮತ್ತು ಒಂದು ಸಾವಿರದ ೯೭೯ ಯಾತ್ರಿಕರು ೪ ಗಂಟೆಗೆ ಪಹಲ್ಗಾಮ್ ಬೇಸ್ ಕ್ಯಾಂಪ್‌ಗೆ ತೆರಳಿದರು.

<><*<><>*><>

ಸರ್ಕಾರಿ ನೌಕರರು, ರಾಷ್ಟ್ರೀಯ ಸ್ವಯಂಸೇವಕ ಸಂಘ- ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸುವ ಕುರಿತು ಇದ್ದ ನಿಷೇಧವನ್ನು ಕೇಂದ್ರ ಸರ್ಕಾರ ತೆರವುಗೊಳಿಸಿದೆ. ೧೯೬೬ರ ನವೆಂಬರ್‌ನಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರ ಆಳ್ವಿಕೆಯಲ್ಲಿ ಹೇರಲಾಗಿದ್ದ ಈ ನಿಷೇಧವನ್ನು, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ ಸಚಿವಾಲಯ ತೆಗೆದುಹಾಕಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವಿಯಾ, ೫೮ ವರ್ಷಗಳ ಹಿಂದೆ ೧೯೬೬ ರಲ್ಲಿ ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸುವ ಅಸಂವಿಧಾನಿಕ ಆದೇಶವನ್ನು, ಪ್ರಧಾನಿ ನರೇಂದ್ರಮೋದಿ ನೇತೃತ್ವದ ಸರ್ಕಾರ ಹಿಂಪಡೆದಿದೆ ಎಂದು ತಿಳಿಸಿದ್ದಾರೆ. ಹರಿಯಾಣ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ಸೇರಿದಂತೆ ಹಲವಾರು ರಾಜ್ಯ ಸರ್ಕಾರಗಳು

ಈಗಾಗಲೇ ಸರ್ಕಾರಿ ನೌಕರರು ಹಾಗೂ ಆರ್‌ಎಸ್‌ಎಸ್‌ಗೆ ಸಂಬಂಧಿಸಿರುವ ನಿರ್ಬಂಧಗಳನ್ನು ತೆಗೆದುಹಾಕಿವೆ.

<><*<><>*><>

ಆಕಾಶವಾಣಿಯ ದ್ವಿಭಾಷಾ ನೇರ ಫೋನ್ -ಇನ್ ಕಾರ್ಯಕ್ರಮ ಪಬ್ಲಿಕ್ ಸ್ಪೀಕ್‌ನಲ್ಲಿ ’ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ಸುಲಭ ವಿಧಾನ’ ಕುರಿತ ಚರ್ಚೆ ಇಂದು ರಾತ್ರಿ ೯.೩೦ಕ್ಕೆ ಪ್ರಸಾರ ಆಗಲಿದೆ. ಆದಾಯ ತೆರಿಗೆ ಆಯುಕ್ತೆ ಸೌಮ್ಯ ಆಚಾರ್ ಮತ್ತು ಚಾಟರ್ಡ್ ಅಕೌಂಟೆಂಟ್ ಸಂಜೀವ್ ನಾರಾಯಣ ಅವರು ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ವೇಳೆ ಕೇಳುಗರು ಹಳೆಯ ಮತ್ತು ಹೊಸ ತೆರಿಗೆ ಪದ್ಧತಿ ಫಾರ್ಮ್-೧೬ ರಂತಹ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಬಹುದು. ಇಂದು ರಾತ್ರಿ ೯.೩೦ರಿಂದ ದೂರವಾಣಿ ಸಂಖ್ಯೆ ೦೧೧ -೨೩೪೨೧೦೫೦ ಮತ್ತು ೦೧೧-೨೩೩೧೪೪೪೪ ಕ್ಕೆ ಕರೆ ಮಾಡಿ ಪ್ರಶ್ನೆಗಳನ್ನು ಕೇಳಬಹುದಾಗಿದೆ. ಕೇಳುಗರು ೯೨೮೯೦೯೪೦೪೪ ಈ ವಾಟ್ಸಾಪ್ ಸಂಖ್ಯೆಗೂ ತಮ್ಮ ಸಂದೇಹಗಳನ್ನು ಕಳುಹಿಸಬಹುದಾಗಿದೆ.

ಈ ಕಾರ್ಯಕ್ರಮವನ್ನು ಆಕಾಶವಾಣಿಯ ಗೋಲ್ಡ್ ಚಾನಲ್ ಮತ್ತು ಹೆಚ್ಚುವರಿ ತರಂಗಾಂತರಗಳಲ್ಲೂ ಆಲಿಸಬಹುದಾಗಿದೆ. ಆಕಾಶವಾಣಿಯ ವೆಬ್‌ಸೈಟ್, ನ್ಯೂಸ್ ಆನ್ ಏರ್ ಡಾಟ್ ಜಿಒವಿ ಡಾಟ್ ಇನ್ ಮತ್ತು ಯೂಟ್ಯೂಬ್ ಚಾನಲ್, ನ್ಯೂಸ್ ಆನ್ ಏರ್ ಅಫೀಷಿಯಲ್‌ನಲ್ಲೂ ಕಾರ್ಯಕ್ರಮ ಲಭ್ಯವಿರಲಿದೆ.

<><*<><>*><>

೨೦೨೪ರ ಅಮೆರಿಕ ಅಧ್ಯಕ್ಷೀಯ ಚುನಾವಣೆ ಸ್ಪರ್ಧೆಯಿಂದ ಹೊರಗುಳಿಯುವುದಾಗಿ ಅಮೆರಿಕ ಅಧ್ಯಕ್ಷ ಜೋ ಬಿಡೆನ್ ಘೋಷಿಸಿದ್ದಾರೆ. ಡೆಲವೇರ್‌ನಲ್ಲಿರುವ ತಮ್ಮ ಬೀಚ್ ಹೌಸ್‌ನಲ್ಲಿ ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿರುವಂತೆಯೇ ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಸಂದೇಶ ನೀಡಿದ್ದಾರೆ. ಪತ್ರವೊಂದನ್ನು ಪೋಸ್ಟ್ ಮಾಡಿರುವ ೮೧ ವರ್ಷದ ಡೆಮಾಕ್ರಟಿಕ್ ಪಕ್ಷದ ಬೈಡನ್, "ಅಧ್ಯಕ್ಷರಾಗಿ ನಿಮಗೆ ಸೇವೆ ಸಲ್ಲಿಸುವುದು ನನ್ನ ಜೀವನದ ದೊಡ್ಡ ಗೌರವವಾಗಿದೆ ಎಂದಿದ್ದಾರೆ. "ಮರು ಚುನಾವಣೆಯನ್ನು ಬಯಸುವುದು ನನ್ನ ಉದ್ದೇಶವಾಗಿದ್ದರೂ, ನನ್ನ ಪಕ್ಷ ಮತ್ತು ದೇಶದ ಹಿತದೃಷ್ಟಿಯಿಂದ ನನ್ನ ಉಳಿದ ಅವಧಿಗೆ ಅಧ್ಯಕ್ಷನಾಗಿ ನನ್ನ ಕರ್ತವ್ಯಗಳನ್ನು ಪೂರೈಸುವುದರ ಮೇಲೆ ಗಮನ ಹರಿಸುವುದು ಉತ್ತಮವಾಗಿದೆ ಎಂದು ಭಾವಿಸುತ್ತೇನೆ. ಈ ವಾರದ ನಂತರ ನನ್ನ ನಿರ್ಧಾರದ ಬಗ್ಗೆ ರಾಷ್ಟ್ರದೊಂದಿಗೆ ಹೆಚ್ಚು ವಿವರವಾಗಿ ಮಾತನಾಡುತ್ತೇನೆ

ಎಂದು ತಿಳಿಸಿದ್ದಾರೆ. ಡೆಮಾಕ್ರಟಿಕ್ ಪಕ್ಷವು ಈಗ ಗೊಂದಲದಲ್ಲಿ ಮುಳುಗಿದ್ದು, ನವೆಂಬರ್ ಚುನಾವಣೆಯ ವೇಳೆಗೆ ಹೊಸ ಅಭ್ಯರ್ಥಿಯನ್ನು ಹುಡುಕಬೇಕಾಗಿದೆ. ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಮುಂಚೂಣಿಯಲ್ಲಿದ್ದಾರೆ. ಬೈಡನ್ ಆರೋಗ್ಯ ಕುರಿತು ವ್ಯಾಪಕವಾಗಿ ಚರ್ಚೆ ನಡೆಯುತಿತ್ತು. ಬೈಡನ್ ಚುನಾವಣೆ ಕಣದಿಂದ ಹಿಂದೆ ಸರಿಯುವಂತೆಯೂ ಒತ್ತಡ ಕೇಳಿಬರುತಿತ್ತು. ಈ ನಡುವೆ ಬೈಡನ್ ಈ ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ.

<><*<><>*><>

ಪ್ಯಾರಿಸ್ ಒಲಿಂಪಿಕ್ಸ್ ಪ್ರಚಾರ ಮತ್ತು ಪ್ರಾಯೋಜಕತ್ವಕ್ಕಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ- ಬಿಸಿಸಿಐ, ಭಾರತೀಯ ಒಲಿಂಪಿಕ್ಸ್ ಸಂಸ್ಥೆಗೆ ೮.೫ ಕೋಟಿ ರೂಪಾಯಿಗಳನ್ನು ನೀಡುವುದಾಗಿ ಕಾರ್ಯದರ್ಶಿ ಜೈ ಶಾ ಘೋಷಿಸಿದ್ದಾರೆ. ಈ ಹಣಕಾಸಿನ ಬೆಂಬಲಕ್ಕಾಗಿ, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ ಬಿಸಿಸಿಐಗೆ ಧನ್ಯವಾದ ಅರ್ಪಿಸಿದ್ದಾರೆ. ಈ ಸಂಬಂಧ ಮಾತನಾಡಿದ ಮಾಂಡವೀಯ, ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಪ್ರತಿಯೊಬ್ಬ ಕ್ರೀಡಾಪಟು ದೇಶಕ್ಕೆ ಹೆಮ್ಮೆ ತರುತ್ತಾರೆ ಎಂದು ಹೇಳಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ಗಾಗಿ ಭಾರತೀಯ ತಂಡ ೧೧೭ ಕ್ರೀಡಾಪಟುಗಳನ್ನು ಒಳಗೊಂಡಿದ್ದು, ಇದರಲ್ಲಿ ೭೦ ಪುರುಷರು ಮತ್ತು ೪೭ ಮಹಿಳೆಯರು ಮತ್ತು ೧೪೦ ಸಹಾಯಕ ಸಿಬ್ಬಂದಿ ಇದ್ದಾರೆ. ೨೦೨೪ರ ಪ್ಯಾರಿಸ್ ಒಲಿಂಪಿಕ್ಸ್ ಇದೇ ತಿಂಗಳ ೨೬ರಂದು ಆರಂಭವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ <>*><>